# ಕೃತಕ ಬುದ್ಧಿಮತ್ತೆ ಮತ್ತು ಜಾಗತಿಕ ಆತಂಕಗಳು

**ರೇಣುಕಪ್ರಸಾದ್ ಬಿ.ಆರ್.***

**DOI: https://doi.org/10.5281/zenodo.21242162**

**ABSTRACT**

ಕೃತಕ ಬುದ್ಧಿಮತ್ತೆ (ಎ.ಐ.) ಇಂದು ಕೇವಲ ತಾಂತ್ರಿಕ ವಿಸ್ಮಯವಾಗಿರದೆ, ಜಾಗತಿಕ ಮಟ್ಟದ ಗಂಭೀರ ಚರ್ಚೆ ಹಾಗೂ ಆತಂಕಗಳಿಗೆ ಕಾರಣವಾಗಿದೆ. ಮನುಷ್ಯನ ಮೆದುಳಿನಂತೆ ಕಾರ್ಯನಿರ್ವಹಿಸುವ ಈ ಸಂಕೀರ್ಣ ತಂತ್ರಜ್ಞಾನವು ಅಗಾಧ ಸಾಧ್ಯತೆಗಳ ಜೊತೆಗೆ ಮಾಹಿತಿ ಕಳವು, ನಕಲಿ ಕಲೆಯ ಸೃಷ್ಟಿ (ಕಾಪಿರೈಟ್ ಉಲ್ಲಂಘನೆ) ಹಾಗೂ ಏಕಸ್ವಾಮ್ಯದಂತಹ ಬಹುದೊಡ್ಡ ಅಪಾಯಗಳನ್ನು ಜಗತ್ತಿನೆದುರು ತೆರೆದಿಟ್ಟಿದೆ. ಅಮೆರಿಕಾದ ಸಂಸದೀಯ ಚರ್ಚೆಯ ಅಂಶಗಳನ್ನು ಆಧರಿಸಿ, ಎ.ಐ. ನಿಯಂತ್ರಣಕ್ಕೆ ವಿಶ್ವಸಂಸ್ಥೆಯ ಮಾದರಿಯ ಜಾಗತಿಕ ಸಂಸ್ಥೆಯ ಸ್ಥಾಪನೆ, ಪಾರದರ್ಶಕತೆ, ಗುಣಮಟ್ಟದ ಲೇಬಲ್, ಪರವಾನಗಿ ಕಡ್ಡಾಯಗೊಳಿಸುವಿಕೆ ಹಾಗೂ ಕಟ್ಟುನಿಟ್ಟಾದ ಕಾನೂನುಗಳ ತುರ್ತು ಅಗತ್ಯವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಕೆಲವೇ ಕಾರ್ಪೊರೇಟ್ ಕಂಪನಿಗಳ ಕೈಗೊಂಬೆಯಾಗಿ ಇಡೀ ಜಗತ್ತು ನಿಯಂತ್ರಿಸಲ್ಪಡುವ ಮುನ್ನ, ತಂತ್ರಜ್ಞಾನವನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವ ಮಾರ್ಗಸೂಚಿಗಳು ಅತ್ಯಗತ್ಯ. ಭವಿಷ್ಯದ ಸವಾಲುಗಳನ್ನು ಎದುರಿಸಲು ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಎ.ಐ. ಕುರಿತಾದ ಜಾಗೃತಿ ಮತ್ತು ಪಠ್ಯಕ್ರಮ ಅಳವಡಿಕೆಯ ಅನಿವಾರ್ಯತೆಯನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

**KEYWORDS:** ಕೃತಕ ಬುದ್ಧಿಮತ್ತೆ (ಎ.ಐ.), ಜಾಗತಿಕ ಆತಂಕಗಳು, ತಂತ್ರಜ್ಞಾನ ನಿಯಂತ್ರಣ, ಡೇಟಾ ಭದ್ರತೆ, ಎ.ಐ. ಸಾಕ್ಷರತೆ.

* **ಡಾ. ರೇಣುಕಪ್ರಸಾದ್ ಬಿ.ಆರ್.,** ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು.

ಜಗತ್ತಿನಲ್ಲಿ ಹೆಚ್ಚು ಚರ್ಚಿತವಾಗುತ್ತಿರುವ ಸಮಕಾಲೀನ ವಿಚಾರವೆಂದರೆ ಅದು ಕೃತಕ ಬುದ್ಧಿಮತ್ತೆ. ಒಂದು ಕಾಲದಲ್ಲಿ ಅಂದರೆ ಕೆಲವು ದಶಕಗಳ ಹಿಂದೆ ಸಾಫ್ಟ್‌ವೇರ್ ಬಗ್ಗೆ ಜಗತ್ತು ಎಷ್ಟೆಲ್ಲಾ ಮಾತನಾಡುತ್ತಿತ್ತೋ ಹಾಗೇ ಇಂದು ಎ.ಐ ಬಗ್ಗೆ ಮಾತನಾಡುತ್ತಿದೆ. ಎ.ಐ ನಿಂದ ಏನೆಲ್ಲಾ ಸಾಧ್ಯ ಮತ್ತು ಏನು ಅಸಾಧ್ಯ ಎಂಬ ಚರ್ಚೆಗಳು ವಿಜ್ಞಾನಿ, ತಂತ್ರಜ್ಞಾನಿಗಳಲ್ಲಿ ಅಲ್ಲ ಜನಸಾಮಾನ್ಯರ ಮಟ್ಟದಲ್ಲಿ ಚರ್ಚಿತವಾಗುತ್ತಿದೆ. ಅವರವರಿಗೆ ತಿಳಿದ ಅಲ್ಪಸ್ವಲ್ಪ ವಿಚಾರಗಳನ್ನು ಗಹನವೆಂಬ ರೀತಿಯಲ್ಲೇ ಚರ್ಚಿಸುತ್ತಿರುವುದು ಮುಂದಿನ ದಿನಗಳಲ್ಲಿ ಎ.ಐ. ಜನಸಾಮಾನ್ಯರ ಬದುಕಿನೊಳಗೆ ಬದಲಾವಣೆಗಳಿಗೆ ಕಾರಣವಾಗುವುದು ನಿಶ್ಚಿತವೆಂಬಂತಿದೆ. ಹಾಗಾಗಿ ಎ.ಐ. ನ ಸ್ವರೂಪ ಕಾರ್ಯವೈಖರಿ ಅದರ ಪರಿಣಾಮಗಳು ಹೀಗೆ ಎ.ಐ. ನ ಸುತ್ತ ನಡೆಯುತ್ತಿರುವ ಹಲವು ಚರ್ಚೆಗಳು ಕುತೂಹಲಕಾರಿಯಾಗಿವೆ.

ಎ.ಐ. ಅಂದರೇನು? ಎಂದು ಪ್ರಶ್ನಿಸಿಕೊಂಡಾಗ ಕನ್ನಡದಲ್ಲಿ ಅದನ್ನು ಕೃತಕ ಬುದ್ಧಿಮತ್ತೆ ಎಂದು ಭಾಷಾಂತರಿಸಿಕೊಳ್ಳಬಹುದು. ಅದರ ಬಗ್ಗೆ ಅರಿವಿದ್ದವರು ಅದನ್ನು ಒಂದು ಸಂಕೀರ್ಣ ತಂತ್ರಜ್ಞಾನ ಎಂದು ಕರೆಯುತ್ತಾರೆ. ನಾವು ಯಾವುದಾದರೂ ಒಂದು ಯಂತ್ರದಿಂದ ತಯಾರಾದ ವಸ್ತುವನ್ನು ಬಳಸುವಾಗ ಅದು ಹೇಗೆ ಕೆಲಸ ಮಾಡುತ್ತದೆ ಎಂದು ಚಿಂತಿಸಬೇಕಾಗಿಲ್ಲ. (ಉದಾ: ಗಡಿಯಾರ ಕೆಲಸ ಮಾಡುವುದು, ಕಾರಿನ ಇಂಜಿನ್ ಕೆಲಸ ಮಾಡುವುದು ಇತ್ಯಾದಿ.) ಆದರೆ ಎ.ಐ. ಬಳಸುವಾಗ ಅದರ ಬಗ್ಗೆ ಸ್ವಲ್ಪವಾದರೂ ತಿಳಿದುಕೊಳ್ಳಬೇಕು. ಇಲ್ಲವಾದರೆ ಎಐ ಗೆ ಮರುಳಾಗುವ ಸಾಧ್ಯತೆ ಹೆಚ್ಚು ಎನ್ನುತ್ತಾರೆ ತಂತ್ರಜ್ಞರು.

ಎಐ ಕೂಡಾ ಒಂದು ಸಾಫ್ಟ್‌ವೇರ್. ಇದುವರೆಗಿನ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಎಂಜಿನಿಯರ್ ನೀಡುವ ನಿರ್ದೇಶನಗಳನ್ನು (ಕೋಡ್ ರೂಪದಲ್ಲಿ) ಕಂಪ್ಯೂಟರ್ ನ ಮೂಲಕ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಬಳಸಲಾಗುತ್ತಿತ್ತು. ಆದರೆ ಈಗ ಎಐ ನ ಕೋಡ್ ಸರಳ ನಿರ್ದೇಶನಗಳಿಗೆ ಬದಲಾಗಿ ಸಂಕೀರ್ಣವಾದ ನಿರ್ದೇಶನಗಳನ್ನು ಅರ್ಥೈಸಿಕೊಳ್ಳುವ ಮನುಷ್ಯನ ಮೆದುಳಿನಂತೆ ಕೆಲಸ ಮಾಡಿಬಿಟ್ಟರೆ ಅದನ್ನು ತಂತ್ರಜ್ಞಾನದ ಮೂಲಕ ಸಾಧಿಸುವಲ್ಲಿ ಯಶಸ್ವಿಯಾಗಿಬಿಟ್ಟರೆ! ಏನೆಲ್ಲಾ ಸಾಧ್ಯತೆಗಳು ಜಗತ್ತಿನ ಮುಂದೆ ತೆರೆದುಕೊಳ್ಳುತ್ತವೆ ಊಹಿಸಲು ಸಾಧ್ಯವೇ? ಇದನ್ನು ಸಾಧಿಸುವಲ್ಲಿ ಇಂದಿನ ಇಂಜಿನಿಯರಿಂಗ್ ತಂತ್ರಜ್ಞಾನ ದಾಪುಗಾಲಿಟ್ಟು ಮುನ್ನಡೆ ಸಾಧಿಸಿದೆ. ಮುಂದಿನ ದಿನಗಳಲ್ಲಿ ಅದರ ಪರಿಣಾಮಗಳನ್ನು ನೋಡುವುದಷ್ಟೇ ಉಳಿದಿರುವುದು.

ಇಂಜಿನಿಯರಿಂಗ್ ಅಧ್ಯಯನದಲ್ಲಿ ಮುಂಚೂಣಿಯಲ್ಲಿರುವ ವಿಭಾಗವೆಂದರೆ ಎ.ಐ. ಅಂದರೆ ಮಶಿನ್ ಲರ್ನಿಂಗ್. ಈ ಮಶೀನ್ ಲರ್ನಿಂಗ್ ಎನ್ನುವುದು ಹೇಗೆ ಕಾರ್ಯನಿರ್ವಹಿಸುತ್ತದೆ ಎನ್ನುವುದೇ ಕುತೂಹಲಕಾರಿ ವಿಷಯ. ಖಾಲಿಬುರುಡೆಗೆ ಬೇಕಾದ ಡೇಟಾ ತುಂಬುವ ಮೂಲಕ ನಮಗೆ ಎಂತಹ ಮೆದುಳು ಬೇಕೋ ಅಂತಹುದನ್ನು ತಯಾರಿಸಿಕೊಳ್ಳುವ ವಿಧಾನವೇ ಮಶೀನ್ ಲರ್ನಿಂಗ್. ಕಂಪ್ಯೂಟರ್ ನ ಭಾಷೆಯ (ಸೊನ್ನೆ ಒಂದು) ಮೂಲಕ ಕಂಪ್ಯೂಟರ್ ಗೆ ಮನುಷ್ಯನ ಭಾಷೆಗಳನ್ನು ಅರ್ಥ ಮಾಡಿಸುವ ಆ ಮೂಲಕ ತನಗೆ ಬೇಕಾದಂತಹ ಮಾಡೆಲ್ ಗಳನ್ನು ತಯಾರಿಸಿಕೊಳ್ಳುವ ತಂತ್ರಜ್ಞಾನ ಈಗಾಗಲೇ ಮನುಷ್ಯನ ಕೈಸೇರಿದೆ. ಇದರಿಂದಾಗುವ ಪ್ರಯೋಜನಗಳೇನು? ಎಂಬ ಪ್ರಶ್ನೆಗಿಂತ ಮೊದಲಿಗೆ ಕೇಳಿಕೊಳ್ಳಬೇಕಾದದ್ದು ಇದರಿಂದ ಮನುಷ್ಯನ ಬದುಕಿಗೆ ಎದುರಾಗುವ ಆತಂಕಗಳೇನು? ಎಂಬುದನ್ನು. ಏಕೆಂದರೆ ಮನುಷ್ಯ ಜಗತ್ತಿಗೆ ಇಂಟರ್ನೆಟ್ ಕಾಲಿಟ್ಟಾಗ ಬಹಳಷ್ಟು ಪ್ರಯೋಜನಕಾರಿಯಾಗಿತ್ತು. ಅದರಿಂದಾಗಿಯೇ ಸೋಷಿಯಲ್ ಮೀಡಿಯಾಗಳು

ಹುಟ್ಟಿಕೊಂಡವು. ಅವುಗಳು ಒಂದುಕಡೆ ಮನುಷ್ಯ ಸಂಬಂಧಗಳನ್ನು ಬೆಸೆಯುವ ಸೇತುವೆಗಳಾದರೆ, ಮತ್ತೊಂದು ಕಡೆ ಸಂಬಂಧಗಳನ್ನು ಕದಡುವ ವಿಷವರ್ತುಲಗಳಾದವು ಎಂಬುದು ಸತ್ಯವೇ ಆಗಿದೆ. ಹಾಗಾಗಿಯೇ ಎ.ಐ. ಮುಂದೊಂದು ದಿನ ತಂದೊಡ್ಡುವ ಆತಂಕಗಳ ಬಗ್ಗೆ ಈಗಾಗಲೇ ಮಾತುಗಳು ಆರಂಭವಾಗಿವೆ.

ತಂತ್ರಜ್ಞಾನವನ್ನು ನಿರಾಕರಿಸುವ ಕಾಲವನ್ನು ದಾಟಿ ಬಂದಿರುವ ಮನುಷ್ಯ, ಅದರ ಆತಂಕಕಾರಿ ಸಂಗತಿಗಳನ್ನು ಅರ್ಥಮಾಡಿಕೊಂಡು ಮುನ್ನಡೆಯಬೇಕಿದೆ. ಈ ಹಿನ್ನೆಲೆಯಲ್ಲಿ ಕನ್ನಡದ ಲೇಖಕಿ ಮಧು ವೈ.ಎನ್ ಅವರು ಲೇಖನವೊಂದರಲ್ಲಿ ಎ.ಐ. ನ ಆತಂಕಗಳನ್ನು ಹೀಗೆ ಪ್ರಸ್ತಾಪಿಸುತ್ತಾರೆ:

“2023 ರ ಮೇ ಹದಿನಾರರಂದು ಅಮೇರಿಕಾದ ಜುಡಿಶಿಯರಿ ಕಮಿಟಿ ಒಂದು ವಿಚಾರಣಾ ಅಧಿವೇಶನವನ್ನು ಏರ್ಪಡಿಸಿತ್ತು. ಅಮೇರಿಕಾದ ಚುನಾಯಿತ ಪ್ರತಿನಿಧಿಗಳು, ಓಪನ್ ಎ.ಐ ಕಂಪನಿಯ ಮುಖ್ಯಸ್ಥ ಸ್ಯಾಮ್, ಐ.ಬಿ.ಎಂ ಕಂಪನಿಯ ವೈಸ್ ಪ್ರೆಸಿಡೆಂಟ್ ಕ್ರಿಶ್ಚಿಯಾನ ಮತ್ತು ಎ.ಐ ವಿಜ್ಞಾನಿ (ಮತ್ತು ಟೀಕಾಕಾರ) ಮಾರ್ಕಸ್ ನನ್ನು ಚರ್ಚೆಗೆ ಕರೆದಿದ್ದರು. ಚರ್ಚೆ ಸತತ ಮೂರು ಗಂಟೆಗಳ ಕಾಲ ಜರುಗಿತು. ಸಂಸದರು ಸಾಮಾನ್ಯ ಜನರ ಪರವಾಗಿ ಕಾನೂನು ರೂಪಿಸುವ ಹೊಣೆ ಹೊತ್ತವರಾಗಿಯೂ ಅನೇಕ ಪ್ರಶ್ನೆಗಳನ್ನು ತಂತ್ರಜ್ಞರತ್ತ ಎಸೆದರು.

ಸಂಸದರೆಲ್ಲರ ಆತಂಕ ಒಂದೇ ಆಗಿತ್ತು. ಈಗಾಗಲೇ ಸೋಷಿಯಲ್ ಮೀಡಿಯಾಗಳನ್ನು ಸಡಿಲಬಿಟ್ಟು ಡ್ರಗ್ಸುಗಳು, ಬಾಂಬುಗಳು, ಮಕ್ಕಳ ವೇಶ್ಯಾವಾಟಿಕೆ, ರಾಜಕೀಯ ಪಲ್ಲಟಗಳು ಮುಂತಾದ ಅನೇಕ ದುಷ್ಪರಿಣಾಮಗಳನ್ನು ಅನುಭವಿಸುತ್ತಿದ್ದೇವೆ. ಎ.ಐ ನಿಂದಲೂ ಹಾಗೆ ಆದರೆ ಏನು ಗತಿ ಎಂದು. ಅಲ್ಲಿನ ಚರ್ಚೆಯಿಂದ ಸ್ಯಾಮ್, ಮಾರ್ಕಸ್, ಕ್ರಿಶ್ಚಿಯಾನರಿಂದ ಹೊರಬಂದ ಕೆಲವು ಅಂಶಗಳು ಅಥವಾ ಸಲಹೆಗಳು ಹೀಗಿವೆ:

ಎ.ಐ ಗೆ ಒಂದು ಜಾಗತಿಕ ಸಂಸ್ಥೆ ಬೇಕು. ಡಬ್ಲ್ಯುಎಚ್‌ಒ, ಯುನೆಸ್ಕೊ ಗಳಿರುವಂತೆ. ಅದು ಎ.ಐ ನಿಯಂತ್ರಿಸುವ ಕಾನೂನು ಕಾಯ್ದೆಗಳನ್ನು ರೂಪಿಸಬೇಕು. ಎಐ ಸಾಫ್ಟ್‌ವೇರ್ ಗಳನ್ನು ಪರಿಶೀಲಿಸಲು ಒಂದು ಸರ್ವಸ್ವತಂತ್ರ ಏಜೆನ್ಸಿ ಇರಬೇಕು. ಅದರಲ್ಲಿ ಸ್ವತಂತ್ರ ಎಐ ವಿಜ್ಞಾನಿಗಳು, ಆಡಿಟರ್ ಗಳು, ಜನಪ್ರತಿನಿಧಿಗಳು ಸದಸ್ಯರಾಗಿರಬೇಕು.

ಕರೋನಾದಂತಹ ಲಸಿಕೆಯನ್ನು ಹೇಗೆ ಕೆಲವೇ ಜನರ ಮೇಲೆ ಪ್ರಯೋಗಿಸಿ ಫಲಿತಾಂಶವನ್ನು ಅವಲೋಕಿಸಿ ನಂತರ ಉಳಿದೆಲ್ಲಾ ಜನರಿಗೆ ಕೊಡಲಾಯಿತೋ ಹಾಗೆ ಯಾವುದೇ ಎಐ ಉಪಕರಣವನ್ನು ಮೊದಲು ಕೆಲವು ಜನರ ಮೇಲೆ ಪ್ರಯೋಗಿಸಿ ನಂತರ ಸಾರ್ವತ್ರಿಕಗೊಳಿಸಬೇಕು. ಅದಕ್ಕೂ ಮುನ್ನ ಏಜೆನ್ಸಿಯಿಂದ ಒಪ್ಪಿಗೆ ಪಡೆಯಬೇಕು.

ಒಂದು ಆಹಾರ ಪದಾರ್ಥದ ಪೊಟ್ಟಣದ ಮೇಲೆ ಜಿಡ್ಡಿನ ಅಂಶ ಇಷ್ಟು, ಸಕ್ಕರೆ ಅಂಶ ಇಷ್ಟು, ಆಲ್ಕೋಹಾಲ್ ಅಂಶ ಇಷ್ಟು ಎಂದು ಇರುತ್ತದೋ ಹಾಗೆ ಪ್ರತಿ ಎಐ ಉಪಕರಣದ ಮೇಲೆ ಗುಣಮಟ್ಟ ಇಷ್ಟು, ಇದರ ನಿಖರ ಅಂಶ ಇಷ್ಟು ಎಂಬ ಲೇಬಲ್ ಹಾಕಬೇಕು. ಹೇಗೆ ಯುದ್ಧೋಪಕರಣಗಳನ್ನು, ಲಸಿಕೆಗಳನ್ನು ತಯಾರಿಸಲು ಕೆಲವು ಕಂಪನಿಗಳಿಗೆ ಲೈಸೆನ್ಸ್ ಕೊಡಲಾಗುವುದೋ ಹಾಗೆ ಕಂಪನಿಗಳ ಕ್ಷಮತೆ, ಪಾರದರ್ಶಕತೆ, ವಿಶ್ವಾಸಾರ್ಹತೆಯನ್ನು ನಿರೂಪಿಸಿ ಲೈಸೆನ್ಸ್ ಪಡೆದುಕೊಳ್ಳುವಂತಿರಬೇಕು.

ಎಐ ಉಪಕರಣವನ್ನು ಸಾರ್ವಜನಿಕ ಬಳಕೆಗೆ ಬಿಡುವ ಮುನ್ನ ಮತ್ತು ಬಿಟ್ಟ ನಂತರವೂ ಅದರ ಮೇಲೆ ನಿಗಾ ಇಡುವ, ಅಗತ್ಯವಿದ್ದಲ್ಲಿ ಕಾನೂನಾತ್ಮಕವಾಗಿ ಹಿಂಪಡೆಯುವ

ಸ್ವಾತಂತ್ರ್ಯ ಏಜೆನ್ಸಿಗೆ ಇರಬೇಕು. ಅಕಸ್ಮಾತ್ ಯಾವುದೇ ಎಐ ಉಪಕರಣದಿಂದ ಜನರಿಗೆ ತೊಂದರೆಯಾದಲ್ಲಿ ಕಂಪನಿಯ ಮೇಲೆ ಕೇಸ್ ಹಾಕುವಂತಿರಬೇಕು. ಉದಾ: ತೂಕ ಇಳಿಸಿಕೊಳ್ಳುವ ಸಲಹೆ ನೀಡುವ ಎಐ ಸಾಫ್ಟ್‌ವೇರ್ ನಿಂದ ಬಳಕೆದಾರನ ಆರೋಗ್ಯದಲ್ಲಿ ಏರುಪೇರಾದರೆ ಕಂಪನಿಯು ದಂಡ ತೆರುವಂತಿರಬೇಕು.

ಈಗಿನ ಕೆಲವು ಎಐ ಉಪಕರಣಗಳು ಒಬ್ಬ ಹಾಡುಗಾರನ ಧ್ವನಿಯನ್ನು ಸಂಗೀತಗಾರನ ಶೃತಿಯನ್ನು ಆರಾಮಾಗಿ ನಕಲಿಸಿ ಕೊಡುತ್ತಿವೆ. ಇದರಿಂದ ಕಾಪಿರೈಟ್ ವಯಲೇಷನ್ ಆಗುತ್ತಿದೆ. ಮುಂದಿನ ದಿನಗಳಲ್ಲಿ ಭೀಮಸೇನ್ ಜೋಷಿಯವರ ಕ್ಯಾಸೆಟ್ಟುಗಳೇ ಬೇಕಿಲ್ಲ. ಹೀಗಾದಾಗ ಕಲೆ ಒರಿಜಿನಾಲಿಟಿಯನ್ನು ಕಳೆದುಕೊಳ್ಳುತ್ತದೆ. ಎಲ್ಲೆಲ್ಲೂ ಕಳಪೆ ಶುಷ್ಕ ಅವೇ ಮಾದರಿಯ ಕಲೆ ಸೃಷ್ಟಿಯಾಗತೊಡಗುತ್ತದೆ. ಆದ್ದರಿಂದ ಕಂಪನಿಗಳು ಎಐ ತರಬೇತಿಯಲ್ಲಿ ಏನೆಲ್ಲಾ ಡೇಟಾ ಬಳಸಿದ್ದಾರೆ ಅದನ್ನು ಬಹಿರಂಗ ಮಾಡಬೇಕು. ಯಾರದೇ ಡೇಟಾ ಬಳಸುವಾಗ ಅವರ ಒಪ್ಪಿಗೆ ಪಡೆಯುವಂತಿರಬೇಕು.

ಯಾವುದೇ ಬಳಕೆದಾರನಿಗೆ ತಾನು ಯಾರೊಂದಿಗೆ ವ್ಯವಹರಿಸುತ್ತಿದ್ದೇನೆ ಎಂಬ ಖಚಿತ ಮಾಹಿತಿ ಒದಗಿಸಬೇಕು. ಉದಾ: ನಿಮ್ಮ ಮೊಬೈಲ್ ಕೆಟ್ಟು ಕಸ್ಟಮರ್ ಸರ್ವೀಸಿಗೆ ಕಾಲ್ ಮಾಡಿದಾಗ ಆ ಕಡೆಯಿಂದ ಬರುವ ಉತ್ತರ ಮನುಷ್ಯರದೋ ಎಐ ಉಪಕರಣದ್ದೋ ಎಂಬುದನ್ನು ಮೊದಲೇ ತಿಳಿಸಬೇಕು.

ಕೆಲವು ಎಐ ಮಾಡೆಲ್ಲುಗಳು ಜನರನ್ನು ಕೇಳದೆ ಅವರ ಅಭಿಪ್ರಾಯ ಊಹಿಸಬಲ್ಲ ಶಕ್ತಿಯುಳ್ಳದ್ದಾಗಿವೆ. ಅಂತಹ ಮಾಡೆಲ್ಲುಗಳು ಚುನಾವಣೆ, ಶೇರ್ ಮಾರ್ಕೆಟ್, ಯುದ್ಧ ಸಾಮಗ್ರಿ ಮುಂತಾದ ದುಬಾರಿ ಕ್ಷೇತ್ರಗಳಲ್ಲಿ ತಲೆ ತೂರಿಸಿದರೆ ಆಗುವ ಅಪಾಯ ಹೇಳಲಸಾಧ್ಯ. ಇವು ಏಜೆನ್ಸಿಗಳ ಹದ್ದುಗಣ್ಣಿನಲ್ಲಿರಬೇಕು ಅಥವಾ ನಿಷೇಧಿಸಬೇಕು.

ಹದಿಮೂರು ವರ್ಷದ ಮಗು ಮೂವತ್ತೊಂದು ವರ್ಷದ ಅಪ್ಪನು ನಂಬುವಂತೆ ಸುಳ್ಳು ಹೇಗೆ ಹೇಳುವುದು ಎಂದು ಕೇಳಿದಾಗ ಉಪಾಯ ಹೇಳಿಕೊಡುವ ಎಐ ಉಪಕರಣಗಳು ಇರುವುವು. ಚಿಕ್ಕ ಮಕ್ಕಳಿಗೆ ಎಐ ತಂತ್ರಜ್ಞಾನ ಅಪಾಯಕಾರಿ. ಮಕ್ಕಳಿಗೆ ಎಐ ನಿಷೇಧಿಸಬೇಕು. ಆದರೆ ಹೇಗೆ ದೊಡ್ಡವರ ಫೋನ್ ಮಕ್ಕಳಿಗೆ ಸಿಗುವುದನ್ನು ಕಾನೂನು ತಡೆಯಲಾಗದೋ ಹಾಗೆ ದೊಡ್ಡವರ ಎಐ ಉಪಕರಣಗಳು ಮಕ್ಕಳ ಕೈಗೆ ಸಿಗಬಹುದಲ್ವಾ? ಇವು ಉತ್ತರವಿಲ್ಲದ ಆತಂಕಗಳು.

ಎಐ ಅಲ್ಗೋರಿತಂ ಮಾಡೆಲ್ಲುಗಳಿಗೆ ಎಲ್ಲರೂ ಒಪ್ಪುವ ಮೌಲ್ಯಗಳ ತರಬೇತಿ ಕೊಡುವಂತಿರಬೇಕು. ಕಂಪನಿಗಳು ಇದಕ್ಕೆ ಅವಕಾಶ ಮಾಡಿಕೊಡಬೇಕು. ಚಾಟ್‌ಜಿಪಿಟಿಯು ಓಪನ್ ಎಐ ಕಂಪನಿಯ ನಿಯಂತ್ರಣದಲ್ಲಿಯೇ ಇದ್ದರೂ ಅದು ಹೊರತಂದಿರುವ ಆಟೋಜಿಪಿಟಿ ಎಂಬ ಪ್ಲಗಿನ್ ಅನ್ನು ಯಾರು ಬೇಕಾದರೂ ಬಳಸಿ ಹೊಸ ಎಐ ಉಪಕರಣ ತಯಾರಿಸಬಹುದು. ಈ ಆಟೋಜಿಪಿಟಿ ಇಂಟರ್ನೆಟ್ ಮಾಹಿತಿ ಬಳಸಿಕೊಳ್ಳಬಹುದಾಗಿದೆ. ಈಗಾಗಲೇ ಇದನ್ನು ಬಳಸಿಕೊಂಡ ಅನೇಕ ಮೊಬೈಲ್ ಆಪ್‌ಗಳು ಬರುತ್ತಿವೆ. ಇದು ಸೈಬರ್ ಕಳ್ಳರ ಕೈಗೆ ಸಿಕ್ಕಿದರೆ ಆಗುವ ಅನಾಹುತಗಳು ಊಹಿಸಲಸಾಧ್ಯ. ಆದ್ದರಿಂದ ಆಟೋಜಿಪಿಟಿಯನ್ನು ಹಿಂಪಡೆಯಬೇಕಿದೆ. ಎಐ ತಂತ್ರಜ್ಞಾನದ ಸಂಶೋಧನೆಗೆ ಎಲ್ಲಿಂದ ಫಂಡ್ ಬರುತ್ತಿದೆ ಅದು ಪಾರದರ್ಶಕವಾಗಿರಬೇಕು. ಮತ್ತು ಸದುದ್ದೇಶಿತ ಸಂಶೋಧನೆಗಳಿಗಷ್ಟೇ ಫಂಡಿಂಗ್ ಮಾನ್ಯ ಮಾಡಬೇಕು. ಎಐ ಮತ್ತು ಅದರ ಮೇಲಿನ ನಿಯಂತ್ರಣ ಜಗತ್ತಿನ ಎಲ್ಲಾ ಭಾಷೆಗಳ ಸೇವೆಗಳಿಗೆ ಅನ್ವಯವಾಗಬೇಕು. ಕೋರ್ಟು ಪೊಲೀಸು ಮುಂತಾದ ಕಡೆ ಎಐ

ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸಬಾರದು.

ಮುಖ್ಯವಾಗಿ ಎಐ ತಂತ್ರಜ್ಞಾನ ಕೆಲವೇ ಕೆಲವು ಕಂಪನಿಗಳ ಸ್ವತ್ತಾಗಬಾರದು. ಹಾಗಾದಾಗ ಆ ಎರಡು ಮೂರು ಕಂಪನಿಗಳು ಇಡೀ ಜಗತ್ತನ್ನು ಆಳಲು ಪ್ರಾರಂಭಿಸುತ್ತವೆ. ಓಪನ್ ಎಐ ಲಾಭರಹಿತ ಕಂಪನಿ ಎಂದು ಹೇಳಿಕೊಂಡಿದ್ದರೂ ಅದೀಗ ಮೈಕ್ರೋಸಾಫ್ಟ್ ನ ಅಧೀನದಲ್ಲಿದೆ. ಎಲ್ಲಾ ಎಐ ಉಪಕರಣಗಳು ಕೊನೆಗೆ ಹೀಗೆ ಲಾಭದ ಕಂಪನಿಗಳ ತೆಕ್ಕೆಯೊಳಗೆ ಬೀಳುವ ಭೀತಿ ಇದೆ.

ಮೇಲಿನ ಅನೇಕ ಸಲಹೆಗಳನ್ನು ಈಗಾಗಲೇ ಕಂಪನಿಗಳು ಅಳವಡಿಸಿಕೊಂಡಿವೆ. ಗಮನಿಸಿದಲ್ಲಿ ಚಾಟ್‌ಜಿಪಿಟಿಯಾಗಲೀ ಮೆಟಾ ಆಗಲಿ, ಜೆಮಿನಿ ಆಗಲಿ ತಾವು ಕೊಡುವ ಉತ್ತರಗಳು ಕೆಲವು ಸಲ ತಪ್ಪಾಗಿರಬಹುದು ಎಂದು ಅಡಿಬರಹ ಬರೆದುಕೊಂಡಿರುತ್ತವೆ". ಹಾಗಾಗಿಯೇ ಆಧುನಿಕ ಜಗತ್ತಿನ ಮುಂದೆ ಹೊಸ ತಂತ್ರಜ್ಞಾನ ಎಐ ಎಂಬ ಹೆಸರಿನೊಂದಿಗೆ ಎದುರಾಗಿದೆ. ಅದನ್ನು ಸರಿಯಾದ ರೀತಿಯಲ್ಲಿ ಮನುಷ್ಯ ಜಗತ್ತಿನ ಸ್ನೇಹಿತನನ್ನಾಗಿ ಮಾಡಿಕೊಳ್ಳಲು ನಾವು ಮಾಡಬೇಕಿರುವುದು ಮುಂದೆ ಎದುರಾಗಬಹುದಾದ ಆತಂಕಗಳನ್ನು ಚರ್ಚಿಸಿ ಅರಿವನ್ನು ಪಡೆದುಕೊಳ್ಳುವುದು, ಈ ವಿಚಾರಗಳನ್ನು ಉನ್ನತ ಶಿಕ್ಷಣದಲ್ಲಿ ಅದರ ಪಠ್ಯಕ್ರಮಗಳಲ್ಲಿ ತರುವ ಮೂಲಕ ಹೊಸ ಪೀಳಿಗೆಯ ಸಮಾಜವನ್ನು ರೂಪಿಸಬೇಕಾದದ್ದು ಉನ್ನತಶಿಕ್ಷಣದ ಜವಾಬ್ದಾರಿಯೂ ಆಗಿದೆ.